# ಕ್ರೇಜಿ ರಾಜಿ

ಜೋರು ನಗು. ನಗುವಿನಿಂದ ಕೊಂಚ ಕದಲಿದ ಟೋಪಿಯನ್ನು ಸರಿಮಾಡುವ ಬಲಗೈ. ಟ್ರಿಮ್ ಮಾಡಿದ ಮೀಸೆಯಲ್ಲಿ ಅಲ್ಲಲ್ಲಿ ಬಿಳಿಕೂದಲು. 'ಕೇಕಿನ ಮಂಚವಂತೆ. ಅದರ ಮೇಲೆ ನಾಯಕಿ ಮಲಗುವುದಂತೆ. ಅದನ್ನು ನೋಡಿ ಜನ ರೋಮಾಂಚನಗೊಳ್ಳುತ್ತಾರಂತೆ. ಹೀಗೆಲ್ಲಾ ಏನೇನೋ ಅಂದುಕೊಂಡು, ಅದನ್ನೇ ನಂಬಿ ಲೆಕ್ಕವಿಲ್ಲದಷ್ಟು ಸೀನ್‌ಗಳನ್ನು ಮಾಡಿಬಿಟ್ಟಿದ್ದೇನೆ. ಈಗ ಅವನ್ನೆಲ್ಲಾ ನೋಡಿದರೆ ನನಗೇ ನಗು ಬರುತ್ತದೆ...' ಮಾತಿಗೆ ಪೂರ್ಣವಿರಾಮ ಹಾಕುವ ಮೊದಲೇ ಮತ್ತೆ ನಗು. ಟೋಪಿಯ ಅದೇ ಕದಲಿಕೆ.

ತಮ್ಮನ್ನು ತಾವು ಸಲೀಸಾಗಿ ಗೇಲಿ ಮಾಡಿಕೊಳ್ಳುವ ಅಪರೂಪದ ನಟ ಅವರು. ತಾವು ನಿರ್ದೇಶಿಸಿದ ಮೊದಲ ದೃಶ್ಯ ಘಟಾನುಘಟಿ ನಿರ್ದೇಶಕ ರಾಮ್‌ಗೋಪಾಲ್ ವರ್ಮಾ ಅವರಿಗೆ ಅಚ್ಚುಮೆಚ್ಚು ಎಂದು ಅನೇಕ ಸಲ ಹೇಳಿಕೊಂಡಿದ್ದಾರೆ. ನಾಯಕ ಆಗಲೆಂದೇ ನಿರ್ದೇಶಕನಾದ ಅವರಿಗೆ ತಮ್ಮ ಸಾಮರ್ಥ್ಯ, ದೌರ್ಬಲ್ಯ ಎರಡರ ಅರಿವೂ ಇದೆ. ಅಪ್ಪನ ನಿರ್ಮಾಣ ಸಂಸ್ಥೆಯ ದೊಡ್ಡ ಬ್ಯಾನರ್ ಬೆನ್ನಿಗಿದ್ದೂ ಅದನ್ನು ಮೀರಿ ಬೆಳೆದದ್ದು ಅವರ ಅಗ್ಗಳಿಕೆ.

'ಬರೀ ರೀಮೇಕ್ ಯಾಕೆ ಮಾಡುತ್ತೀರಿ ಎನ್ನುವ ಪ್ರಶ್ನೆಯನ್ನು ಬಿಟ್ಟು ಬೇರೆ ಏನಾದರೂ ಇದ್ದರೆ ಕೇಳಿ ಚೆನ್ನಾಗಿರುತ್ತದೆ' ಎಂದು ನಿರೀಕ್ಷಣಾ ಜಾಮೀನು ಪಡೆದವರಂತೆ ಮಾತಿಗೆ ಕೂರುವ ವರಸೆ ಗೊತ್ತಿರುವ ಅವರಿಗೆ ಮೊನ್ನೆಮೊನ್ನೆಯವರೆಗೂ ಎಲೆಕ್ಟ್ರಾನಿಕ್ ಮಾಧ್ಯಮ ಅಷ್ಟಕ್ಕಷ್ಟೇ ಎನ್ನುವಂತಿತ್ತು. ಯಾರಾದರೂ ಮೈಕನ್ನು ಮುಂದೆ ಹಿಡಿದರೆ ಹಿಂದೂಮುಂದೂ ನೋಡದೆ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. 'ಚಾನೆಲ್ ಮೈಕ್ ಎದುರು ಮಾತನಾಡುವುದು ನನ್ನ ಪ್ರಕಾರ ಆತ್ಮವಂಚನೆ' ಎಂದು ಅವರು ನೇರವಾಗಿ ಹೇಳಿದ್ದರು.

ನಡುರಾತ್ರಿ ಎಚ್ಚರಗೊಂಡರೆ ಬರೆಯುವುದು ಕಳೆದ ಕೆಲವು ವರ್ಷಗಳಿಂದ ಅವರಿಗೆ ಅಭ್ಯಾಸ. ಅದಕ್ಕೇ ಹತ್ತಿರದಲ್ಲೇ ಪೆನ್ನು, ರೈಟಿಂಗ್ ಪ್ಯಾಡ್ ಇಟ್ಟುಕೊಂಡಿರುತ್ತಾರೆ. ಅವರೇ ಹೇಳಿಕೊಳ್ಳುವಂತೆ ಕಾಮಿಡಿ ಸೀನ್‌ಗಳನ್ನು ಬರೆಯುವ ಕಲೆ ಅವರಿಗೆ ಈಚೀಚೆಗೆ ಸಿದ್ಧಿಸಿದೆ. ಅಂಥ ಸೀನ್‌ಗಳನ್ನು ಅವರು ಸಿನಿಮಾದಲ್ಲಿ 'ವರ್ಕ್‌ಔಟ್ ಆಗುವ ಸೀನ್‌ಗಳು' ಎಂದೇ ಬಣ್ಣಿಸುತ್ತಾರೆ.

ನಾಯಕಿಯರ ಸೊಂಟವನ್ನು ಕಲಾತ್ಮಕವಾಗಿ ತೋರಿಸಿ, ಅದರ ಸುತ್ತ ತಮ್ಮ ಮುಖವನ್ನು ಪ್ರದಕ್ಷಿಣೆ ಹಾಕುವ ಚಾಳಿಯನ್ನು ಅವರು ಹಿಂದೊಮ್ಮೆ ಸಮರ್ಥಿಸಿಕೊಂಡಿದ್ದರು. ತಾವು ಹಾಗೆಲ್ಲಾ ಮಾಡುವುದು ಅದನ್ನು ಬಯಸುವ ಪ್ರೇಕ್ಷಕರಿಗಾಗಿ ಎಂದು ಸಮರ್ಥನೆ ಕೊಟ್ಟು, ಮತ್ತೆ ಗೊಳ್ಳನೆ ನಕ್ಕಿದ್ದರು. ರಾಸಲೀಲೆಗಳ ಕುರಿತು ಯಾರಾದರೂ ಮಾತನಾಡತೊಡಗಿದರೆ, ಅಭಿಮಾನಿಗಳು ಇವರ ಸಿನಿಮಾಗಳ ದೃಶ್ಯಗಳಿಗೇ ಹೋಲಿಸುವುದುಂಟು.

ತಮ್ಮ ಮಗನನ್ನು ನಾಯಕ ಮಾಡಿ, ಹಳೆಯ ಕ್ರೇಜಿ ಇಮೇಜನ್ನು ತುಸು ಬದಿಗೆ ಒತ್ತಿರುವ ಈ ನಟ ಈಗೀಗ ವಯಸ್ಸಿಗೆ ತಕ್ಕಂಥ ಪಾತ್ರಗಳನ್ನು ಒಪ್ಪಿಕೊಳ್ಳುತ್ತಿದ್ದಾರೆ. ಅವರ ಅಭಿನಯದ ಇತ್ತೀಚಿನ ಒಂದು ಚಿತ್ರ ಗಲ್ಲಾಪೆಟ್ಟಿಗೆ ದೃಷ್ಟಿಯಿಂದಲೂ ಯಶಸ್ವಿಯಾಗಿರುವುದರಿಂದ ಬಿಳಿ ಗಡ್ಡಕ್ಕೆ ಬಣ್ಣ ಬಳಿಯುವುದು ಅವರಿಗೀಗ ಬೇಕಿಲ್ಲ. ಆದರೆ, ಹಳೆಯ ನೆನಪುಗಳನ್ನು ಕೆದಕಿದರೆ ಮಾತ್ರ ಅದೇ ರೀತಿ ಲೇವಡಿ ಮಾಡಿಕೊಂಡು ನಗುತ್ತಾರೆ. ಎಲೆಕ್ಟ್ರಾನಿಕ್ ಮಾಧ್ಯಮ ಈಗ ಮೊದಲಿನಷ್ಟು ವರ್ಜ್ಯವೇನೂ ಅಲ್ಲ.

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68